**<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ</u>**

ಸಿ.ಸಿ. ನಂ.804/2020

ಸಿ.ಡಬ್ಲೂಃ 9 ಪಿ.ಡಬ್ಲೂಃ 8

ಹೆಸರುಃ ಗಾಯತ್ರಿ

ಗಂಡನ ಹೆಸರುಃ ವಿನಾಯಕ ಜಕ್ಕನಗೌಡ್ರ

ವಯಸ್ಸುಃ 30 ವರ್ಷ

ಉದ್ಯೋಗಃ ಮನೆಗೆಲಸ

ವಿಳಾಸಃ ರೋಣ

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 21/08/2024 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ</u>**

**1.** ದಿನಾಂಕ 16/05/2020 ರಂದು ಸಾದು ಅಜ್ಜನ ಮಠದ ಹತ್ತಿರ ಇರುವ ನಮ್ಮ ಮನೆಯಲ್ಲಿ ನಮ್ಮ ಮನೆತನದ ಜಮೀನುಗಳ ಪಾಲು ವಾಟ್ನಿಯ ಬಗ್ಗೆ ಮಾತುಕತೆ ನಡೆಯುತ್ತಿತ್ತು. ಆ ಸಮಯದಲ್ಲಿ ನಮ್ಮ ಓಣಿಯ ಹಿರಿಯರಾದ ಚಾಸಾ–5 ವಿರುಪಾಕ್ಷಪ್ಪ ಶಿರೋಳ ಹಾಗೂ ಚಾಸಾ–6 ಖಾಧೀರಭಾಷ ಮುಲ್ಲಾ ಹಾಗೂ ನನ್ನ ಗಂಡನ ಕಾಕಂದಿರಾದ ಚಾಸಾ–4 ಶೇಖರಗೌಡ ಮತ್ತು ಚಾಸಾ–1 ಶಿವನಗೌಡ ಹಾಗೂ ನನ್ನ ಗಂಡ ವಿನಾಯಕ ಮಾತನಾಡುತ್ತಿದ್ದಾಗ ಅಲ್ಲಿಗೆ ಆರೋಪಿತರಾದ ಪ್ರಶಾಂತ ಮತ್ತು ಆತನ ತಾಯಿ ಲಕ್ಷ್ಮವ್ವ ನಮಗೆ ಪಾಲು ವಾಟ್ನಿ ಸರಿ ಮಾಡಿಲ್ಲಾ ಎಂದು ಅವಾಚ್ಯವಾಗಿ ಬೋಸಡಿ ಮಕ್ಕಳಾ ಎಂದು ಬೈದಾಡುತ್ತಿದ್ದರು. ಆ ಸಮಯದಲ್ಲಿ ನಾನು ಮನೆಯ ಒಳಗಡೆ ಮಕ್ಕಳನ್ನು ಕರೆದುಕೊಂಡು ಇದ್ದೆ. ಆಗ ನನ್ನ ಮಾವ ಶಿವನಗೌಡ ನಾವು ಹಿರಿಯರು ಇದ್ದೇವೆ, ನಾವು ಎಲ್ಲಾ ಮಾತನಾಡುತ್ತಾ ಇದ್ದೇವೆ ಸ್ವಲ್ಪ ತಡಿಯಪ್ಪ ಎಂದು ಹೇಳಿದರು. ಆಗ ಪ್ರಶಾಂತ ಅವರ ಮಾತನ್ನು ಕೇಳಲಿಲ್ಲ. ನಾನು ಹೊರಗಡೆ ಬಂದೆ. ಚಾಸಾ–1 ನನ್ನ ಗಂಡನ ತಂದೆಯ ತಮ್ಮ. ಆಗ ಪ್ರಶಾಂತ ಮನೆಯಿಂದ ಹೊರಗಡೆ ಹೋಗಿ ನಿಮ್ಮದೇನು ಹಚ್ಚಿ ರೀ ಎನ್ನುತ್ತಾ, ನಮ್ಮ ಮನೆಯ ಪಕ್ಕದಲ್ಲಿ ಕಟ್ಟಿಗೆ ಅಡ್ಡೆ ಇದ್ದು, ಅಲ್ಲಿಂದ ಒಂದು ಉಳಿ ತೆಗೆದುಕೊಂಡು ವಾಪಸ್ ಬಂದ. ವಾಪಸ್ ಬಂದು ಚಾಸಾ–1 ಇವರ ಬೆನ್ನಿಗೆ ಪ್ರಶಾಂತ ಉಳಿಯಿಂದ ಅವರ ಬುಜಕ್ಕೆ ಹೊಡೆದ. ಆಗ ನನ್ನ ಗಂಡ ವಿನಾಯಕ ಇಷ್ಟೆಲ್ಲಾ ಹಿರಿಯರು ಇದ್ದೇವೆ ಕಾಕನಿಗೆ ಏಕೆ ಹೊಡೆಯುತ್ತಿದ್ದೀಯಾ ಎಂದು ಬಿಡಿಸಲು ಹೋದರು. ಆಗ ಪ್ರಶಾಂತ ನನ್ನ ಗಂಡನಿಗೆ ನೀನೇನು ಬುದ್ದಿ ಹೇಳುತ್ತೀಯಾ ಎಂದು , ಅದೇ ಉಳಿಯಿಂದ ಅವರ ತಲೆಗೆ ಹೊಡೆಯಲು ಹೋದ. ಅವರ ಎಡಗೈಯನ್ನು ಅಡ್ಡ ಹಿಡಿದಾಗ, ಸದರಿ ಉಳಿ ಅವರ ಎಡಗೈಗೆ ಬಿತ್ತು. ಆಗ ಬಹಳಷ್ಟು ರಕ್ತ

ಸೋರುತ್ತಿತ್ತು.ಆಗ ಅಲ್ಲೇ ಇದ್ದಂತಹ ಲಕ್ಷ್ಮವ್ವ ಬಡಿಗೆ ತೆಗೆದುಕೊಂಡು ಬಂದು ನನ್ನ ಗಂಡ ವಿನಾಯಕ ಇವರಿಗೆ ತಲೆಗೆ ಮತ್ತು ತೊಡೆಗೆ ಹೊಡೆದರು. ಆಗ ವಿನಾಯಕ ಆ ನೋವಿನಿಂದ ಚಿರಾಡುತ್ತಿದ್ದರು. ಆಗ ಅಲ್ಲೆ ಇದ್ದಂತಹ ಸಂತೋಷ ಮತ್ತು ವಿಜಯ ಮತ್ತು ಶಿವಾನಂದ ಜಗ್ಗಲ್, ವಿರುಪಾಕ್ಷಪ್ಪ ಶಿರೋಳ, ಖಾಧೀರ್ ಭಾಷಾ ಮುಲ್ಲಾ ಇವರು ಜಗಳ ಬಿಡಿಸಿದರು. ಅಲ್ಲೆ ಒಂದು ಖಾಸಗಿ ಕಾರ್ ನಲ್ಲಿ ವಿಜಯ ಮತ್ತು ಸಂತೋಷ ಮತ್ತು ನಾನು ಮತ್ತು ನನ್ನ ಗಂಡ ವಿನಾಯಕ ಮತ್ತು ಶಿವನಗೌಡ ಚಾಸಾ-1 ರೋಣ ಸರಕಾರಿ ಆಸ್ಪತ್ರೆಗೆ ಹೋದೆವು. ಆಗ ಅಲ್ಲಿ ಇದ್ದಂತಹ ವೈದ್ಯರು ಬಹಳಷ್ಟು ರಕ್ತ ಸೋರಿದೆ, ನರಗಳು ಕಟ್ಟ ಆಗಿಬರಹುದು ಎಂದು ಹೇಳಿ ನಮಗೆ 108 ಆಂಬ್ಯುಲೇನ್ಸನಲ್ಲಿ ಗದಗ ಜಿಲ್ಲಾ ಆಸ್ಪತ್ರೆಗೆ ಹೋದೆವು. ರೋಣ ಆಸ್ಪತ್ರೆಯಲ್ಲಿ ಇದ್ದಂತಹ ಪೊಲೀಸರು ಏನು ಜಗಳ ಎಂದು ಕೇಳಿದರು. ಆಗ ಚಾಸಾ-1 ಅವರಿಗೆ ವಿವರಿಸಿದರು. ಜಿಲ್ಲಾ ಆಸ್ಪತ್ರೆಯಲ್ಲಿ ವಿನಾಯಕ ಇವರ ಕೈಯನ್ನು ಎಕ್ಸರೇ ಮಾಡಿ ನೋಡಿದರು. ನಂತರ ಹುಬ್ಬಳ್ಳಿಗೆ ಕರೆದುಕೊಂಡು ಹೋಗಿ ಅಪರೇಷನ್ ಮಾಡಬೇಕಾಗುತ್ತದೆ ನಮ್ಮಲ್ಲಿ ಸೌಲಭ್ಯ ಇಲ್ಲಾ ಎಂದು ಹೇಳಿದರು. ಜಿಲ್ಲಾ ಆಸ್ಪತ್ರೆಯಲ್ಲಿ ಎರಡು ದಿನ ಇದ್ದೇವು. ಆಗ ಚಾಸಾ-1 ಇವರು ಹುಬ್ಬಳ್ಳಿಗೆ ಬೇಡ, ಈಗ ಲಾಕ್ ಡೌನ್ ಇದೆ, ಬಳ್ಳಾರಿಗೆ ಹೋಗಿ ಅಲ್ಲಿ ವೈದ್ಯರಿಗೆ ತೋರಿಸೋಣ ಎಂದು ಹೇಳಿದರು. ನಾನು ಸಹ ಗೊತ್ತಾಗದೇ ಇರುವುದರಿಂದ ಬಳ್ಳಾರಿಗೆ ಹೋದೆವು. ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಹೋಗಿ ಅಲ್ಲಿ 4-5 ತಾಸು ಆಪರೇಷನ್ ಮಾಡಿದರು. 6 ನರಗಳು ಕಟ್ಟು ಆಗಿದ್ದಾವೆ ಎಂದು ಹೇಳಿದರು. ಈಗಲೂ ಸಹ ನನ್ನ ಗಂಡ ವಿನಾಯಕ ಇವರಿಗೆ ಏನು ಕೆಲಸ ಮಾಡಲು ಆಗುವುದಿಲ್ಲ. ನನ್ನ ಗಂಡ ಮುಂಚೆ ಡ್ರೈವರ್ ಕೆಲಸ ಮಾಡುತ್ತಿದ್ದರು. ನಾವು ಈಗ ಜೀವನ ಮಾಡುವುದು ಕಷ್ಟವಾಗಿದೆ. 1 ನೇ ಆರೋಪಿ ಈಗಲೂ ಸಹ ನಮಗೆ ನಿಮ್ಮನ್ನು ಉಳಿಸಿದ್ದೇ ಹೆಚ್ಚು ನಿಮ್ಮನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕುತ್ತಾ ಇರುತ್ತಾನೆ.

**ಪಾಟೀ ಸವಾಲು ಆರೋಪಿ ಪರ ವಕೀಲರು ಸಮಯ ಕೇಳುತ್ತಿದ್ದು, ಯಾವುದೇ ಸಕಾರಣ ಇಲ್ಲಾ, ಅದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

ADITYA R KALAL

Digitally signed by ADITYA R KALAL
Date: 2024.08.21 16:28:09 +0530

**( ಆದಿತ್ಯ ಆರ್ ಕಲಾಲ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ

ನ್ಯಾಯಾಧೀಶರು ರೋಣ .